


## ಸಂಗ್ರಹಯೋಗ್ಯ ಸಂಚಿಕೆ

ಏಪ್ರಿಲ್ 25ರ 'ಭೂಮಿಯ ಕಥೆಗಳು' ಲೇಖನ ಇರುವ ಸಂಚಿಕೆ ಸಂಗ್ರಹಯೋಗ್ಯ. ವಿಜ್ಞಾನ ಲೇಖಕ ಟಿ. ಆರ್. ಅನಂತರಾಮು ಅವರು ಲೇಖನದಲ್ಲಿ ಭೂಮಿಯನ್ನು ನಮ್ಮ ಪೂರ್ವಿಕರು ಕಂಡುಕೊಂಡ, ಅದರೊಡನೆ ಹೊಂದಿಕೊಂಡು ಬದುಕಿದ ರೀತಿ ನೀತಿಗಳನ್ನು ತಮ್ಮದೇ ಶೈಲಿಯಲ್ಲಿ ಸರಳವಾಗಿ ಹೇಳಿದ್ದಾರೆ. ಹಾಗೆಯೇ ಭೂದೇವಿಯನ್ನು ಯಾವ್ಯಾವ ಹೆಸರಿನಲ್ಲಿ ಕರೆಯುತ್ತಾರೆಂಬ ಪಟ್ಟಿಯನ್ನೇ ಕೊಟ್ಟಿದ್ದಾರೆ. ಯಾವ ಪಠ್ಯಪುಸ್ತಕದಲ್ಲೂ ಇಲ್ಲದ ಮಾಹಿತಿ ಇಲ್ಲಿದೆ. ಜೊತೆಗೆ ಅಪರೂಪದ ಚಿತ್ರಗಳಿವೆ. ಇದು ಕೇವಲ ವಿದ್ಯಾರ್ಥಿಗಳಲ್ಲದೆ ಸಾಮಾನ್ಯರೂ ತಿಳಿದುಕೊಳ್ಳಬೇಕಾದ ಮಾಹಿತಿ.

ಈ ಸಂಚಿಕೆಯ ಮತ್ತೊಂದು ಹಿರಿಮೆ ರಘುನಾಥ ಚ. ಹ. ಅವರ 'ಸಂಕಟಗಳ ಕಾಲಕ್ಕೆ ರಾಜಮದ್ದು' ಲೇಖನ. ರಾಜಕುಮಾರ್ ಅದ್ಭುತವಾಗಿ ನಟಿಸಿರುವ 'ಬಂಗಾರದ ಮನುಷ್ಯ' ಚಿತ್ರವನ್ನು ನಾನು ನೋಡಿದ್ದು ನನ್ನ ತಾಯಿಯ ಜೊತೆಯಲ್ಲಿ 'ಗೀತಾಂಜಲಿ' ಥಿಯೇಟರ್‌ನಲ್ಲಿ. ಆಗ ನನಗೆ 12 ವಯಸ್ಸು. ರಾಜಕುಮಾರ್ ಅಭಿನಯದ ಚಿತ್ರಗಳ ಕಥೆ ನಮ್ಮ ಮನೆಯ ಕಥೆಯೂ ಹೌದು ಎಂಬ ಭಾವನೆ ಬರುತ್ತಿತ್ತು.

ರಾಜಕುಮಾರ್ ನನ್ನ ಮೇಲೆ ಪ್ರಭಾವ ಬೀರಿದ ಘಟನೆ ನನಗಿನ್ನೂ ನೆನಪಿದೆ. 'ಏನಾದರೂ ತಿನ್ನಲು ಕೊಡು' ಎಂದು ಕೇಳಿದ ನನ್ನ ತಾಯಿಗೆ 'ಈಗ ಬರ್ತೇನೆ' ಎಂದು ಸುಳ್ಳು ಹೇಳಿ ಪ್ರಭಾತ್ ಥಿಯೇಟರ್‌ನಲ್ಲಿ ಮಾರ್ನಿಂಗ್ ಷೋ 'ರಾಜದುರ್ಗದ ರಹಸ್ಯ' ಸಿನಿಮಾ ನೋಡಲು ಗೆಳೆಯರೊಂದಿಗೆ ಹೋಗಿದ್ದೆ. ಪ್ರಾರಂಭದ ಮೊದಲೆರಡು ಸೀನ್‌ನಲ್ಲಿ ರಾಜ್ ತನ್ನ ತಾಯಿಯನ್ನು ಪ್ರೀತಿಸುವ, ಗೌರವಿಸುವ, ಹಣ್ಣು ತಿನ್ನಿಸುವ ದೃಶ್ಯ ನೋಡಿ ಪಾಪಪ್ರಜ್ಞೆಯಿಂದ ನರಳುತ್ತಾ ಕೂಡಲೇ ಥಿಯೇಟರ್‌ನಿಂದ ಮನೆಗೆ ಬಂದು ತಾಯಿಗೆ ತಿನ್ನಲು ಕೊಟ್ಟು, ಅವರು ತಿನ್ನುತ್ತಿದ್ದಂತೆ ಅವರಿಗೆ ನಿಜ ವಿಚಾರ ತಿಳಿಸುತ್ತಾ ಅತ್ತುಬಿಟ್ಟೆ. ತಾಯಿಯೂ ಅತ್ತಳು.

ರಘುನಾಥ ಚ.ಹ. ಅವರು ರಾಜಕುಮಾರ್ ಅವರ ವ್ಯಕ್ತಿತ್ವವನ್ನು ಪರಿಚಯಿಸುತ್ತಲೇ ಅವರಲ್ಲಿದ್ದಂತೆ ಅವರ ಸಿನಿಮಾಗಳಲ್ಲೂ ಇದ್ದ ಮೌಲ್ಯಗಳನ್ನು ಪ್ರಸ್ತಾಪಿಸುತ್ತಲೇ, ಸಿನಿಮಾ ಬರಿಯ ಮನರಂಜನೆ ಮಾತ್ರವಲ್ಲದೆ ಮೌಲ್ಯಗಳನ್ನು ಮತ್ತು ಸಂಸ್ಕೃತಿಯನ್ನು ಯಾವ ರೀತಿ ಬಿಂಬಿಸಬೇಕೆಂದು ವಿವರಿಸಿದ್ದಾರೆ.

ಇವೆರಡೂ ಲೇಖನಗಳಿಂದ ಕೂಡಿರುವ ಈ ಸಲದ 'ಸುಧಾ'ದ ಹತ್ತು ಪ್ರತಿಗಳನ್ನು ಈಗಾಗಲೇ ಕೊಂಡಿದ್ದೇನೆ ಮತ್ತು ನನ್ನೊಂದಿಗಿರುವ ಗೆಳೆಯರು ಹಾಗೂ ಸಹೋದ್ಯೋಗಿಗಳಿಗೆ ಹಂಚುತ್ತೇನೆ.

ಥ್ಯಾಂಕ್ಸ್ 'ಸುಧಾ ವಾರಪತ್ರಿಕೆ'. ನಿನ್ನಿಂದ ಇನ್ನಷ್ಟು ನಿರೀಕ್ಷಿಸುವೆ.

—ಪಿ. ಶ್ರೀನಿವಾಸ್, ಬೆಂಗಳೂರು

## ಪ್ರಕೃತಿಯೇ ಉತ್ತರಿಸುವುದು

ಏಪ್ರಿಲ್ 25ರ ಸಂಚಿಕೆಯಲ್ಲಿ 'ನಿಮ್ಮೊಡನೆ' ಪುಟದಲ್ಲಿ ಎನ್. ಉದಯಕುಮಾರ್ ಅವರ ಬರಹ ಚೆನ್ನಾಗಿತ್ತು. ಜಾತಿ ಮತಗಳಿಂದಾಚೆ ಬಂದು ಸಮವಾಗಿ ಬದುಕಿರಿ ಎಂಬ ಬಸವಾದಿ ಶರಣರ ವಚನ, ದಾಸರ ಸಾಹಿತ್ಯ ಓದಿಗೆ ಮತ್ತು ಪ್ರವಚನಕ್ಕೆ ಮಾತ್ರ ಸೀಮಿತವಾಗಿದೆ. ಈ ದುರವಸ್ಥೆಯ ಬೇರು ಮಣ್ಣಿನ ಕಣ ಕಣದಲ್ಲೂ ಆಳವಾಗಿ ಬೇರೂರಿಬಿಟ್ಟಿದೆ. ಪ್ರಾಯಶಃ ಭವಿಷ್ಯದ ದಿನಗಳಲ್ಲಿ ಇದರ ಪರಿವರ್ತನೆಗೆ ಪ್ರಕೃತಿಯೇ ತಕ್ಕ ಉತ್ತರ ನೀಡುವುದು.

—ಅರವಿಂದ ಜಿ. ಜೋಷಿ, ಮೈಸೂರು

## ಕಂದಾಚಾರಗಳು ಕೊನೆಗೊಳ್ಳಲಿ

ಮೇ 2ರ ಸಂಚಿಕೆಯಲ್ಲಿನ ಡಾ. ಅನುಪಮಾ ಅವರ ಮುಟ್ಟು ಲೇಖನ ಮುಟ್ಟಿನ ಬಗೆಗೆ ಇಂದಿನ ಸಮಾಜದಲ್ಲೂ ಇರುವ ಕೀಳರಿಮೆ, ಮೂಢನಂಬಿಕೆ, ಆಚರಣೆಗಳ ಮೇಲೆ ಬೆಳಕು ಚೆಲ್ಲಿ, ಪ್ರಕೃತಿಯ ನೈಸರ್ಗಿಕ ಕ್ರಿಯೆಯನ್ನು ಹಿಂಜರಿಕೆಯಿಲ್ಲದೆ ಎದುರಿಸುವಲ್ಲಿ ಹೆಣ್ಣಿನ ಆತ್ಮಸ್ಥೈರ್ಯ ಹೆಚ್ಚಿಸುವಂತಿದೆ. ನಾವೆಲ್ಲಾ



ಅನುಭವಿಸಿದ ಕೀಳರಿಮೆ, ಮುಜುಗರ, ನಮ್ಮ ಮಕ್ಕಳಿಗೆ ಇಲ್ಲವಾದರೂ ಇಂದೂ ಮುಟ್ಟಿನ ಬಗ್ಗೆ ಮುಂದುವರಿದ ಸಮಾಜದಲ್ಲೂ ಕಂದಾಚಾರಗಳು ಇನ್ನೂ ಚಾಲ್ತಿಯಲ್ಲಿವೆ. ಈ ಲೇಖನ ಜನರ ಕಣ್ತೆರೆಸಲು ಸಫಲವಾಗಲಿ ಎಂದು ಆಶಿಸುತ್ತೇನೆ.

— ಗೀತಾ ನೆಲ್ಲೀಕಾಯಿ

## ನವಿಲುಗಳ ಪರೇಡ್

ಏಪ್ರಿಲ್ 18ರ ಸಂಚಿಕೆಯಲ್ಲಿನ ಸಿದ್ದಲಿಂಗಸ್ವಾಮಿ ಹಿರೇಮಠ ಅವರ, 'ಕ್ವಾರಿಯಲ್ಲಿ ನವಿಲುಗಳ ಪರೇಡ್' ಲೇಖನ ಬಹಳ ಇಷ್ಟವಾಯಿತು. ನವಿಲುಗಳ ಬಗ್ಗೆ ಹೆಚ್ಚಿನ ಮಾಹಿತಿ ಸಿಕ್ಕಿತು, ಗರಿಬಿಚ್ಚಿ ನರ್ತಿಸುವ ನವಿಲುಗಳ ಮೋಹಕ ನೋಟ ನೋಡುವುದೇ ಚೆನ್ನ.

—ಲೀಲಾ ಚಂದ್ರಶೇಖರ, ಬೆಂಗಳೂರು



## ರಾಜಕೀಯ ಯಾಕೆ?

ಏಪ್ರಿಲ್ 25ರ ಸಂಚಿಕೆಯಲ್ಲಿ ರಾಜಕುಮಾರ್ ಅವರ ಕುರಿತು ರಘುನಾಥ ಚ. ಹ. ಬರೆದ



ಲೇಖನವನ್ನು ನಾನು ಬಲವಾಗಿ ಖಂಡಿಸುತ್ತೇನೆ. ಅವರು ಪ್ರಧಾನಿ ಮೋದಿ ಅವರ ಕುರಿತು ತಪ್ಪು ಬರೆದಿದ್ದಾರೆ. ಈ ಲೇಖನ ಕೇವಲ ರಾಜಕುಮಾರ್ ಅವರ ಕುರಿತಾಗಿ ಮಾತ್ರವೇ ಇರಬೇಕಿತ್ತು. ರಾಜ್ ಅವರಿಗೆ ಯಾವತ್ತೂ ರಾಜಕೀಯದಲ್ಲಿ ಆಸಕ್ತಿ ಇರಲಿಲ್ಲ. ಆದರೆ ಈ ಲೇಖನದಲ್ಲಿ ರಾಜಕೀಯವನ್ನು ತುರುಕಲಾಗಿದೆ.

—ಗುರುರಾಜ್ ನಾಗರಾಳ್

## ರಾಜ್ ಸಿನಿಮಾಗಳ ನೆನಪುಗಳು

ಏಪ್ರಿಲ್ 25ರ ಸಂಚಿಕೆಯಲ್ಲಿನ 'ಸಂಕಷ್ಟಗಳ ಕಾಲಕ್ಕೆ ರಾಜಮದ್ದು' ಲೇಖನ ಉತ್ಕೃಷ್ಟವಾಗಿದೆ. 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಅವರು ಅಭಿನಯಿಸದ ಪಾತ್ರಗಳಿಲ್ಲ ಎಂಬುದಕ್ಕೆ ಲೇಖನದಲ್ಲಿ ಉಲ್ಲೇಖಿಸಲಾಗಿರುವ ಅವರ ಸಿನಿಮಾಗಳ ಪಟ್ಟಿಯೇ ಜ್ವಲಂತ ಸಾಕ್ಷಿಯಾಗಿದೆ. ಲೇಖನ ಓದುತ್ತಿದ್ದಂತೆಯೇ ಅವರ ವೈವಿಧ್ಯದ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದ ಸಿನಿಮಾಗಳನ್ನು ನೋಡಿದ ಸವಿನೆನಪುಗಳು ಮನದಲ್ಲಿ ಮರುಕಳಿಸಿದವು.

—ಎಂ.ಕೆ. ಮಂಜುನಾಥ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in